ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು) :

ಅ) 32,855.

ಆ) ಸರಾಸರಿ 5916.

ಇ) ಹೌದು.

ಈ) ಹೌದು.

ಉ) ಆಗಸ್ಟ್ 15 ರಂದು ಘಟಕಗಳಲ್ಲಿ, ಬಸ್ ನಿಲ್ದಾಣಗಳಲ್ಲಿ ಮತ್ತು ಕಾರ್ಯಾಗಾರಗಳಲ್ಲಿ ಕರ್ತವ್ಯ ನಿರ್ವಹಿಸಿದಂತಹ ಎಲ್ಲಾ ಅವಶ್ಯ ಸಿಬ್ಬಂದಿಗಳಿಗೆ ಒಂದು ದಿನದ ಹೆಚ್ಚುವರಿ ವೇತನ ನೀಡಲಾಗಿದೆ.

ಬಾಲವಿಕಾಸ ಅಕಾಡೆಮಿಯ ವ್ಯಾಪ್ತಿ ವಿಸ್ತರಣೆ

897 (1045) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಲವಿಕಾಸ ಅಕಾಡೆಮಿಯನ್ನು ರಾಜ್ಯದಲ್ಲಿ ಸ್ಥಾಪಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಇದರ ಉದ್ದೇಶವೇನು?

ಇ) ಈ ಬಾಲವಿಕಾಸ ಅಕಾಡೆಮಿಗೆ ಸರಕಾರ 2010–11ರಲ್ಲಿ ನೀಡಿರುವ ಅನುದಾನವೆಷ್ಟು?

ಈ) ಈ ಬಾಲವಿಕಾಸ ಅಕಾಡೆಮಿ ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿದೆ?

ಉ) ಈ ಬಾಲವಿಕಾಸ ಅಕಾಡೆಮಿಯ ಅಧ್ಯಕ್ಷರು ಹಾಗೂ ಇತರೆ ಸದಸ್ಯರುಗಳ ವಿವರ ನೀಡುವುದು;

ಊ) ಇಲ್ಲಿಯವರೆಗೆ ಈ ಅಕಾಡೆಮಿ ಕೈಕೊಂಡ ಕಾರ್ಯಕ್ರಮಗಳೇನು?

ಋ) ಈ ಅಕಾಡೆಮಿಯ ವ್ಯಾಪ್ತಿಯನ್ನು ರಾಜ್ಯದಾದ್ಯಂತ ವಿಸ್ತರಿಸಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀ ಸಿ.ಸಿ. ಪಾಟೀಲ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) 18 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಹಾಗೂ ಅತೀ ಹಿಂದುಳಿದ ಗ್ರಾಮೀಣ ಪ್ರದೇಶದ ಮಕ್ಕಳ ಶಿಕ್ಷಣ, ರಕ್ಷಣೆ, ಮಕ್ಕಳ ಹಕ್ಕು,

ಸಾಹಿತ್ಯ, ಸಂಗೀತ, ನಾಟಕ, ನೃತ್ಯ, ಚಿತ್ರಕಲೆ, ಗ್ರಾಮೀಣ ಕ್ರೀಡೆ ಹೀಗೆ ವಿಶೇಷ ಕಲೆಗಳನ್ನು ಗುರುತಿಸಿ ಪ್ರೋತ್ಸಾಹಿಸಿ ಮಕ್ಕಳಿಗೆ ಆತ್ಮಸ್ಥೈರ್ಯ ಮೂಡಿಸಿ ಮಕ್ಕಳ ಸಮಸ್ಯೆಗಳಿಗೆ ಮಕ್ಕಳೇ ಪರಿಹಾರ ಕಂಡುಕೊಳ್ಳುವಲ್ಲಿ ಕಾರ್ಯಕ್ರಮ ರೂಪಿಸುವುದು.

ಮಕ್ಕಳ ಪ್ರತಿಭೆಗಳನ್ನು ಗುರುತಿಸಿ ಸಮಾಜಕ್ಕೆ ಪರಿಚಯಿಸಿ ನೂತನ ಅವಿಷ್ಕಾರಗಳು ಸಂಶೋಧನೆಗಳು ಹಾಗೂ ವಿವಿಧ ತರಬೇತಿ ಕಾರ್ಯಕ್ರಮ ಗಳನ್ನು ರೂಪಿಸುವ ಮೂಲಕ ಮಕ್ಕಳ ಸ್ಥಿತಿಗತಿಗಳನ್ನು ಸುಧಾರಿಸುವುದು.

ಮಕ್ಕಳ ಮನಸ್ಸು ಅರಳಿಸುವ ಮೌಲ್ಯಯುಕ್ತ ಮಕ್ಕಳ ಸಾಹಿತ್ಯ ಮಕ್ಕಳಿಂದ ಹಾಗೂ ಯುವ ಸಾಹಿತಿಗಳಿಂದ ರಚಿಸಲು ಅವಕಾಶ ನೀಡಿ ಮಕ್ಕಳ ಕೈಗೆ ಸುಲಭವಾಗಿ ತಲುಪುವಂತೆ ಮಾಡುವುದು.

ಇ) 1.50 ಕೋಟಿ ರೂ.ಗಳು

ಈ) ಧಾರವಾಡದಲ್ಲಿ ಅಕಾಡೆಮಿಯ ಕೇಂದ್ರ ಕಛೇರಿ ಇದ್ದು, ರಾಜ್ಯದಾದ್ಯಂತ ಚಟುವಟಿಕೆಗಳನ್ನು ನಡೆಸುತ್ತಿದೆ.

ಉ)

ಅಧ್ಯಕ್ಷರು : ಶ್ರೀ ಮಹೇಶ ಟೆಂಗಿನಕಾಯಿ, ಧಾರವಾಡ.

ಸದಸ್ಯರು :

1. ಶ್ರೀ ನಿಂಗು ಸೊಲಗಿ ಶಿಕ್ಷಕರು, ಮುಂಡರಗಿ.
2. ಶ್ರೀಮತಿ ಲೀಲಾವತಿ ಕುಲಕರ್ಣಿ ಶಿಕ್ಷಕಿ, ಗುಲ್ಬರ್ಗಾ ಜಿಲ್ಲೆ.
3. ಶ್ರೀಮತಿ ರತ್ನ ಹಾಲಪ್ಪಗೌಡ–ಅಧ್ಯಕ್ಷರು, ಮಕ್ಕಳ ಚುಟುಕು ಸಾಹಿತ್ಯ, ಮೈಸೂರು.
4. ಡಾ: ಎಚ್.ಆರ್. ತಿಪ್ಪೇಸ್ವಾಮಿ ಕನ್ನಡ ಉಪನ್ಯಾಸಕರು, ಶಿವಮೊಗ್ಗ.
5. ಡಾ: ಪ್ರದೀಪ ಭೂಸನೂರಮಠ, ಪ್ರಾಂಶುಪಾಲರು ವಿಜ್ಞಾನ ವಿಭಾಗ, ಕೊಟ್ಟೂರು ಬಳ್ಳಾರಿ ಜಿಲ್ಲೆ.
6. ಡಾ: ವೆಂಕಮ್ಮಾ ಗಾಂವಕರ, ನಿವೃತ್ತ ಡೀನ್, ಗೃಹ ವಿಜ್ಞಾನ ವಿಭಾಗ, ಧಾರವಾಡ.

ಊ) ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಋ) ಇದರ ವ್ಯಾಪ್ತಿ ರಾಜ್ಯದಾದ್ಯಂತ ಇರುತ್ತದೆ.

ವಿಧಾನ ಸಭಾ ಸದಸ್ಯರಾದ ಶ್ರೀ ರಾಮಲಿಂಗಾರೆಡ್ಡಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1045ಕ್ಕೆ ಅನುಬಂಧ

2009–10ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳ ವಿವರ:–

1. 27–6–2010 ಹಾಗೂ 28–6–2009 ರಂದು ಬೆಳಗಾವಿಯ ರಾಮದುರ್ಗ ಮತ್ತು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಮಕ್ಕಳಲ್ಲೂ ಪರಿಸರ ಪ್ರಜ್ಞೆ ಮೂಡಿಸುವಲ್ಲಿ ಸುರೇಶ ಹೆಬ್ಳಿಕರ ಅವರ ನೇತೃತ್ವದಲ್ಲಿ ಪರಿಸರ ಜಾಗೃತಿ ದಿನಾಚರಣೆ ಕಾರ್ಯಕ್ರಮವನ್ನು ನೆರವೇರಿಸಲಾಗಿದೆ.
2. ದಿನಾಂಕ: 13–10–2009 ರಿಂದ 15–10–2009 ರವರೆಗೆ ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಲ್ಲಿ ಮಕ್ಕಳ ಕಥಾ ಕಮ್ಮಟವನ್ನು ರೂ.55,500/– ಗಳ ವೆಚ್ಚದಲ್ಲಿ ಏರ್ಪಡಿಸಲಾಗಿತ್ತು.
3. ಹಂಪಿ ವಿಶ್ವವಿದ್ಯಾಲಯದಲ್ಲಿ ಮಕ್ಕಳಿಗಾಗಿ ಕವಿತೆಯ ಕಮ್ಮಟವನ್ನು ರೂ.49,400/– ಗಳ ವೆಚ್ಚದಲ್ಲಿ ದಿನಾಂಕ: 7–11–2010 ರಿಂದ 9–11–2009 ರವರೆಗೆ ಜರುಗಿಸಲಾಗಿತ್ತು.
4. ಗದಗ ತೋಂಟದಾರ್ಯ ಸಿದ್ದಲಿಂಗೇಶ್ವರ ಮಠದಲ್ಲಿ ದಿನಾಂಕ 18–12–2009 ರಿಂದ 20–12–2009ರವರೆಗೆ ಕಥಾ ಕಮ್ಮಟದಲ್ಲಿ ರೂ.45,642/– ಗಳ ವೆಚ್ಚದಲ್ಲಿ ಕಾರ್ಯಕ್ರಮ ಜರುಗಿಸಲಾಗಿದೆ.
5. ಕಥಾ ಕಮ್ಮಟವನ್ನು ಅನುಸರಿಸಿ ವಿಜಾಪುರ, ಗದಗ, ಬಳ್ಳಾರಿ, ಧಾರವಾಡ, ಬೆಳಗಾವಿ, ದಾವಣಗೆರೆ, ಹಾವೇರಿ, ಬಾಗಲಕೋಟೆ, ಬೀದರ, ಗುಲ್ಬರ್ಗಾ ಉತ್ತರ ಕನ್ನಡ, ಹಾಸನ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಒಟ್ಟಾರೆ 35 ತಾಲ್ಲೂಕುಗಳಲ್ಲಿ ದುರ್ಗಸಿಂಹದ ಪಂಚತಂತ್ರದ ಕಥೆಗಳನ್ನು ಕಥಾಸಂಚಾರ ಕಾರ್ಯಕ್ರಮವನ್ನು ಜರುಗಿಸಲಾಗಿದೆ.
6. ದಿನಾಂಕ: 23–11–2009 ಮತ್ತು 24–11–2009 ರಂದು ನಾಟಕ ನಿರ್ದೇಶಕರ ಕಮ್ಮಟವನ್ನು ರೂ.7,00,000/–ಗಳ ವೆಚ್ಚದಲ್ಲಿ ಜರುಗಿಸಿ, ಬೆಳಗಾವಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಮಂಡ್ಯ, ಕೊಪ್ಪಳ, ಶಿವಮೊಗ್ಗ, ಗದಗ, ಧಾರವಾಡ, ಉಡುಪಿ, ಬೆಂಗಳೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮಕ್ಕಳಿಗೆ ನಾಟಕ ತರಬೇತಿ ನೀಡಿ

ನಾಟಕ ಸಂಚಾರ ಕಾರ್ಯಕ್ರಮವನ್ನು ಪ್ರತಿ ತಾಲ್ಲೂಕಿನ 5 ಶಾಲೆಗಳಲ್ಲೂ ಜರುಗಿಸಲಾಗಿದೆ.

7. 2011 ರ ಜನವರಿ 28, 29 ಮತ್ತು 30 ರಲ್ಲಿ ಅಂತರಾಷ್ಟ್ರೀಯ ಮಕ್ಕಳ ಚಲನ ಚಿತ್ರೋತ್ಸವವನ್ನು ಮಕ್ಕಳ ಸಿನಿಮಾಗಳನ್ನು ಮೂರು ದಿನ ಧಾರವಾಡದಲ್ಲಿ ನೆರವೇರಿಸಲಾಗಿದೆ.
8. 2-1-2010 ರಿಂದ 2-2-2010 ರವರೆಗೆ ರಾಜ್ಯ ಮಟ್ಟದ ಹೊನಲು ಬೆಳಕಿನ ಖೋಖೋ ಸ್ಪರ್ಧೆ, ಗ್ರಾಮೀಣ ಆಟಗಳ ಕ್ರೀಡಾಕೂಟಗಳನ್ನು ಏರ್ಪಡಿಸಿ ವಿವಿಧ ಜಿಲ್ಲೆಗಳ ಪ್ರತಿಭಾ ಕಾರಂಜಿಯಲ್ಲೂ ಶ್ರೇಷ್ಠ ಪ್ರಶಸ್ತಿ ಪಡೆದ ಮಕ್ಕಳ ತಂಡಗಳಿಂದ ಕಾರ್ಯಕ್ರಮ ತಯಾರಿಸಿ ಬಾಲವಿಕಾಸ ಅಕಾಡೆಮಿ ಬಾಲೋತ್ಸವ ಕಾರ್ಯಕ್ರಮವನ್ನು ರೂ.3,80,561/-ಗಳ ವೆಚ್ಚದಲ್ಲಿ ನೆರವೇರಿಸಲಾಗಿದೆ.
9. ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಉದ್ದೇಶಗಳ ಮಾಹಿತಿ ಯನ್ನೊಳಗೊಂಡ ಪೋಸ್ಟರ್, ಬರೋಚರ್ ಮತ್ತು ತ್ರೈಮಾಸಿಕ ಪತ್ರಿಕೆಗಳನ್ನು ಮುದ್ರಣ ಮಾಡಿಸಿ ರಾಜ್ಯದ ಎಲ್ಲಾ ಇಲಾಖೆಗಳ ಜಿಲ್ಲಾ ಅಧಿಕಾರಿಗಳ ಕಛೇರಿಗಳಿಗೆ ಮಾಹಿತಿಗಾಗಿ ಹಾಗೂ ಪ್ರಚಾರಕ್ಕಾಗಿ ಪ್ರಚುರಪಡಿಸಲಾಗಿದೆ. ಇದಕ್ಕಾಗಿ ರೂ.3,14,000/-ಗಳ ಅನುದಾನ ವೆಚ್ಚ ಮಾಡಲಾಗಿದೆ.
10. ದಿನಾಂಕ: 20-2-2010 ರಿಂದ 23-2-2010 ರವರೆಗೆ ಸರ್ಕಾರಿ ಬಾಲಮಂದಿರ ದಾವಣಗೆರೆಯಲ್ಲಿ 4 ದಿನಗಳ ಕಾಲ ಸೃಜನೋತ್ಸವ ಕಾರ್ಯಕ್ರಮ ನಡೆಸಲಾಯಿತು. ಇದರಲ್ಲಿ ಬಾಲಮಂದಿರದ ಮಕ್ಕಳು, ಸ್ಥಳೀಯ ಮಕ್ಕಳು ಭಾಗವಹಿಸಿದ್ದರು. ಇದರಲ್ಲಿ ನಾಟಕ, ಕಲೆ, ಹಾಡು, ನೃತ್ಯ, ಚಿತ್ರಕಲೆ, ಕರಕುಶಲತೆ ವೈಜ್ಞಾನಿಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಪ್ರತಿಭೆಗಳನ್ನು ಗುರುತಿಸುವಂತಹ ಕಾರ್ಯಕ್ರಮವನ್ನು ರೂ.1,30,000/- ಗಳ ಅನುದಾನದ ವೆಚ್ಚದಲ್ಲಿ ಯಶಸ್ವಿಯಾಗಿ ಸೃಜನೋತ್ಸವ ಕಾರ್ಯಕ್ರಮ ನಡೆಸಲಾಯಿತು.

2010–11ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳ ವಿವರ:–

1. ದಿನಾಂಕ: 16–4–2010 ರಿಂದ ಒಂದು ವಾರ ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿಯಲ್ಲಿ 15 ದಿನಗಳ ಕಾಲ ಕರ್ನಾಟಕ ಬಾಲವಿಕಾಸ ಅಕಾಡೆಮಿ ವತಿಯಿಂದ ಬೇಸಿಗೆ ಶಿಬಿರ ನಡೆಸಲಾಯಿತು.
2. ದಿನಾಂಕ 25–4–2010 ರಿಂದ ಒಂದು ವಾರದವರೆಗೆ ಬೆಳಗಾವಿ ಜಿಲ್ಲಾ ರಾಮದುರ್ಗ ತಾಲ್ಲೂಕಿನ ಕಲಹಾಳ ಮತ್ತು ಚಿಕ್ಕೊಪ್ಪ ಗ್ರಾಮದಲ್ಲಿ ಮಕ್ಕಳ ಬೇಸಿಗೆ ಶಿಬಿರ ನಡೆಸಲಾಯಿತು.
3. ದಿನಾಂಕ: 28–4–2010 ರಿಂದ 13–05–2010ರ ವರೆಗೆ ಧಾರವಾಡದ ಪ್ರಶಾಂತ ನಗರದಲ್ಲಿ ಬೇಸಿಗೆ ಶಿಬಿರ ನಡೆಸಲಾಯಿತು.
4. ದಿನಾಂಕ: 7–7–2010 ರಂದು ಗುಲ್ಬರ್ಗಾ ಹಾಗೂ ಬೆಳಗಾವಿ ವಿಭಾಗದ 12 ಜಿಲ್ಲೆಗಳ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಅವು ನಿರ್ವಹಿಸಬೇಕಾದ ಜವಾಬ್ದಾರಿಗಳ ಕುರಿತು ಒಂದು ದಿನದ ಕಾರ್ಯಾಗಾರವನ್ನು ಬಿಜಾಪುರದಲ್ಲಿ ನಡೆಸಲಾಯಿತು.
5. 12–7–2010 ರಂದು ಮೈಸೂರು ಮತ್ತು ಮಂಗಳೂರು ವಿಭಾಗ ಮಟ್ಟದ 17 ಜಿಲ್ಲೆಗಳ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಅವರು ನಿರ್ವಹಿಸಬೇಕಾದ ಜವಾಬ್ದಾರಿಗಳ ಕುರಿತು ಒಂದು ದಿನದ ಕಾರ್ಯಾಗಾರವನ್ನು ತುಮಕೂರಿನಲ್ಲಿ ನಡೆಸಲಾಯಿತು.
6. ದಿನಾಂಕ: 8–7–2010 ರಂದು ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿಯಲ್ಲಿ 'ಮಕ್ಕಳ ಮಿತ್ರಪಡೆ' ರಚಿಸುವ ಕುರಿತು ಒಂದು ದಿನದ ಕಾರ್ಯಾಗಾರವನ್ನು ಅಂಗನವಾಡಿ ಕಾರ್ಯಕರ್ತೆಯರಿಗೆ ನಡೆಸಲಾಯಿತು.
7. ದಿನಾಂಕ:13–7–2010 ರಂದು ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನಲ್ಲಿ 'ಮಕ್ಕಳ ಮಿತ್ರಪಡೆ' ರಚಿಸುವ ಕುರಿತು ಒಂದು ದಿನದ ಕಾರ್ಯಾಗಾರವನ್ನು ಅಂಗನವಾಡಿ ಕಾರ್ಯಕರ್ತೆಯರಿಗೆ ನಡೆಸಲಾಯಿತು.
8. 2010 ರ ಸೆಪ್ಟೆಂಬರ್ 5 ರಂದು ಶಾಲಾ ಪಠ್ಯೇತರ ವಿಷಯಗಳಲ್ಲಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ಗಣನೀಯ

ಸಾಧನೆಗೈದ ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಪುರಸ್ಕೃತಗೊಂಡ ಶ್ರೇಷ್ಠ ಕಲಾವಿದರನ್ನು ಗುರುನಮನ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

9. 2010ರ ಅಕ್ಟೋಬರ್ 5 ರಂದು ಮಕ್ಕಳ ಚಂದಿರ ಪುಸ್ತಕ ಪ್ರಶಸ್ತಿ ಹಾಗೂ ಅಕಾಡೆಮಿ ಗೌರವ ಪ್ರಶಸ್ತಿ ಕಾರ್ಯಕ್ರಮವನ್ನು ನಡೆಸಿ ಗಣ್ಯರನ್ನು ಸನ್ಮಾನಿಸಲಾಯಿತು.
10. 2010 ರ ಅಕ್ಟೋಬರ್ 19 ಮತ್ತು 20 ರಂದು ಸಂಗೀತ, ನೃತ್ಯ ಅಕಾಡೆಮಿಯ ಸಹಯೋಗದೊಂದಿಗೆ ರಾಜ್ಯ ಮಟ್ಟದ ಬಾಲ ಕಲಾವಿದರಿಂದ ಸಂಗೀತ ಹಾಗೂ ನೃತ್ಯ ಕಾರ್ಯಕ್ರಮವನ್ನು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಏರ್ಪಡಿಸಲಾಯಿತು.
11. 2010ರ ಅಕ್ಟೋಬರ್ 26 ಮತ್ತು 27 ರಂದು 30 ಜಿಲ್ಲೆಗಳಿಂದ ಯುವ ನಾಟಕ ನಿರ್ದೇಶಕರನ್ನು ಗುರುತಿಸಿ ಅವರಿಗೆ 2 ದಿನದ ಕಾರ್ಯಾಗಾರವನ್ನು ಹಮ್ಮಿಕೊಂಡು ಜಿಲ್ಲಾ ಮಟ್ಟದಲ್ಲಿ ಮಕ್ಕಳಿಗೆ ನಾಟಕದಲ್ಲಿ ತರಬೇತಿಯನ್ನು ನೀಡಿ ಸದರಿ ನಾಟಕದ ಸಂಚಾರವನ್ನು ಆಯಾ ಜಿಲ್ಲಾದ್ಯಂತ ನವೆಂಬರ್ ಹಾಗೂ ಡಿಸೆಂಬರ್ 2010 ರಲ್ಲಿ ಹಮ್ಮಿಕೊಳ್ಳಲಾಯಿತು.
12. 2010ರ ಅಕ್ಟೋಬರ್ 28 ಮತ್ತು 29 ರಂದು ಮಾಧ್ಯಮ ಅಕಾಡೆಮಿ ಸಹಯೋಗದೊಂದಿಗೆ 'ಮಾಧ್ಯಮದಲ್ಲಿ ಮಕ್ಕಳು' ಎಂಬ ವಿಷಯದ ಕುರಿತು ಏರ್ಪಡಿಸಿದ ಕಾರ್ಯಾಗಾರದಲ್ಲಿ ಮುದ್ರಣ ಮಾಧ್ಯಮದಲ್ಲಿ ಮಕ್ಕಳು, ರೇಡಿಯೋ ಮತ್ತು ಮಕ್ಕಳು, ಟಿ.ವಿ ಮಾಧ್ಯಮ ಮತ್ತು ಮಕ್ಕಳು, ಮಕ್ಕಳ ಪತ್ರಿಕೆಗಳು, ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಮಕ್ಕಳು, ಜಾಹಿರಾತಿನಲ್ಲಿ ಮಕ್ಕಳು, ಮಕ್ಕಳು ಮತ್ತು ಹೊಸ ಮಾಧ್ಯಮಗಳು, ಮಾಧ್ಯಮ ಗಳಲ್ಲಿ ಮಕ್ಕಳ ಅಲಕ್ಷ್ಯ ಏಕೆ? ಈ ಎಲ್ಲಾ ವಿಷಯಗಳ ಕುರಿತು ಚರ್ಚಿಸಲಾಯಿತು.
13. 2010ರ ನವೆಂಬರ್ 16 ರಿಂದ 22 ರವರೆಗೆ 'ರಾಷ್ಟ್ರೀಯ ಮಕ್ಕಳ ಹಬ್ಬ' ವಿವಿಧತೆಯಲ್ಲಿ ಏಕತೆಯನ್ನು ತರುವ ಉದ್ದೇಶದಿಂದ ಮಕ್ಕಳಲ್ಲಿ ರಾಷ್ಟ್ರೀಯಭಾವೈಕ್ಯತೆಯನ್ನು ಮೂಡಿಸುವ ದಿಸೆಯಲ್ಲಿ ದೇಶದ ವಿವಿಧ ಭಾಗಗಳಿಂದ ಹಾಗೂ ಹೊರ ರಾಷ್ಟ್ರವಾದ

ಶ್ರೀಲಂಕಾದಿಂದ ಮಕ್ಕಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಎಲ್ಲಾ ಮಕ್ಕಳು ಪರಸ್ಪರ ಬೆರೆತು ಸ್ಥಳೀಯ ಮಕ್ಕಳ ಮನೆಗಳಲ್ಲಿ ವಾಸಿಸಿ ತಮ್ಮ ಭಾವನೆಗಳನ್ನು ಹಂಚಿಕೊಂಡು ವಿವಿಧ ಸಾಂಸ್ಕೃತಿಕ ಹಾಗೂ ಸೃಜನಾತ್ಮಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಅತ್ಯಂತ ಯಶಸ್ವಿಯಾಗಿ ಕಾರ್ಯಕ್ರಮವನ್ನು ನಡೆಸಲಾಯಿತು.

14. ರಾಜ್ಯದ 30 ಜಿಲ್ಲೆಗಳಲ್ಲಿ ಎಸ್.ಎಸ್.ಎಲ್.ಸಿ. ಮಕ್ಕಳಿಗಾಗಿ 'ಮಕ್ಕಳೇ ಪರೀಕ್ಷೆಗೆ ಸಿದ್ಧರಾಗಿ' ಎಂಬ ವಿಷಯದ ಕುರಿತು, ಪ್ರತಿ ಜಿಲ್ಲೆಯಲ್ಲಿ 500 ಮಕ್ಕಳಿಗೆ ವಿಷಯ ಪರಿಣಿತರಿಂದ ಮಾಹಿತಿ ಯನ್ನು ನೀಡಿ, ಸಂವಾದ ಕಾರ್ಯಕ್ರಮ ನಡೆಸಲಾಯಿತು.
15. 2011ರ ಜನವರಿ 10 ರಿಂದ 13 ರವರೆಗೆ ಮಕ್ಕಳ ಚಲನಚಿತ್ರ ಗಳನ್ನು ಧಾರವಾಡ ಜಿಲ್ಲೆಯ ಎಲ್ಲಾ ಚಲನಚಿತ್ರ ಮಂದಿರಗಳಲ್ಲಿ ಹಾಗೂ 2011ರ ಜನವರಿ 17 ರಿಂದ 21 ರವರೆಗೆ ಹುಬ್ಬಳ್ಳಿ ಹಾಗೂ ಇತರೆ ತಾಲ್ಲೂಕಿನಲ್ಲಿ ಚಲನಚಿತ್ರ ಸಂಸ್ಥೆ ಚನ್ನೈ ಇವರ ಸಂಯುಕ್ತಾಶ್ರಯದಲ್ಲಿ ಪ್ರದರ್ಶಿಸಲಾಯಿತು.
16. 2011 ರ ಜನವರಿ 13 ರಂದು 'ಮಕ್ಕಳ ವ್ಯಕ್ತಿತ್ವ ವಿಕಸನದಲ್ಲಿ ನಿಲಯ ಪಾಲಕರ ಪಾತ್ರ' ಕುರಿತು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯ ನಿಲಯ ಪಾಲಕರು ಮತ್ತು ಮುಖ್ಯೋಪಾಧ್ಯಾಯರಿಗೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀಕ್ಷಕರಿಗೆ ಒಂದು ದಿನದ ಬೆಳಗಾವಿ ವಿಭಾಗ ಮಟ್ಟದ ಕಾರ್ಯಗಾರವನ್ನು ನಡೆಸಲಾಯಿತು.
17. 2011 ರ ಜನವರಿ 25 ರಂದು ಧಾರವಾಡ ಜಿಲ್ಲಾ ಉತ್ಸವದಲ್ಲಿ ಬಾಲಕಿಯರ ಬಾಲಮಂದಿರದ ವಿದ್ಯಾರ್ಥಿನಿಯರಿಂದ ನಾಟಕ ಪ್ರದರ್ಶನವನ್ನು ಮಾಡಿಸಲಾಯಿತು.
18. 2011 ರ ಮಾರ್ಚ್ 5 ರಂದು 'ಮಕ್ಕಳ ವ್ಯಕ್ತಿತ್ವ ವಿಕಸನದಲ್ಲಿ ನಿಲಯ ಪಾಲಕರ ಪಾತ್ರ' ಕುರಿತು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯ ನಿಲಯ ಪಾಲಕರು ಮತ್ತು ಮುಖ್ಯೋಪಾಧ್ಯಾಯರಿಗೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀಕ್ಷಕರಿಗೆ

ಒಂದು ದಿನದ ಮೈಸೂರು ವಿಭಾಗ ಮಟ್ಟದ ಕಾರ್ಯಗಾರವನ್ನು ನಡೆಸಲಾಯಿತು.

19. 2011ರ ಮಾರ್ಚ್ 13 ರದು ಬೆಳಗಾವಿಯಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿ 'ಮಕ್ಕಳ ವಿಚಾರ ಗೋಷ್ಠಿ' ಕಾರ್ಯಕ್ರಮವನ್ನು ಸಂಪೂರ್ಣವಾಗಿ ಮಕ್ಕಳಿಂದ ಮಕ್ಕಳಿಗಾಗಿ ನಡೆಸಲಾಯಿತು.
20. 2011ರ ಮಾರ್ಚ್ 22 ರಂದು 'ಮಕ್ಕಳ ವ್ಯಕ್ತಿತ್ವ ವಿಕಸನದಲ್ಲಿ ನಿಲಯ ಪಾಲಕರ ಪಾತ್ರ' ಕುರಿತು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯ ನಿಲಯ ಪಾಲಕರು ಮತ್ತು ಮುಖ್ಯೋಪಾಧ್ಯಾಯರಿಗೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀಕ್ಷಕರಿಗೆ ಒಂದು ದಿನದ ಗುಲ್ಬರ್ಗಾ ವಿಭಾಗ ಮಟ್ಟದ ಕಾರ್ಯಗಾರವನ್ನು ನಡೆಸಲಾಯಿತು.
21. ಗ್ರಾಮೀಣ ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ಮುಕ್ತ ಅವಕಾಶ ದೊರಕಿಸಿ ಅವರ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಲು 2010–11ನೇ ಸಾಲಿನಲ್ಲಿ 4 ತಾಲ್ಲೂಕುಗಳಾದ ಬಿಜಾಪುರ ಜಿಲ್ಲೆಯ ಬಾಗೇವಾಡಿ, ತುಮಕೂರು ಜಿಲ್ಲೆಯ ಗುಬ್ಬಿ, ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಹಾಗೂ ದಾವಣಗೆರೆ ತಾಲ್ಲೂಕುಗಳಲ್ಲಿ 'ಮಕ್ಕಳ ಮಿತ್ರಪಡೆ' ಸಮಿತಿ ರಚಿಸಲಾಗಿದೆ.

2011–12ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳ ವಿವರ:–

1. 2011ರ ಏಪ್ರಿಲ್ 11 ರಿಂದ 18 ರವರೆಗೆ ವಿಶೇಷ ಮಕ್ಕಳಿಗಾಗಿ ಸರ್ವತ್ರ ಸ್ವಾಧೀನತಾ ಸಂಸ್ಥೆ ಧಾರವಾಡ ಇವರಿಂದ 3 ದಿನಗಳ ಬೇಸಿಗೆ ಶಿಬಿರವನ್ನು ನಡೆಸಲಾಯಿತು.
2. ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿಗಳಿಂದ ನಾಲ್ಕು ತಾಲ್ಲೂಕಿನ ಮಿತ್ರಪಡೆ ಸಮಿತಿಯ ಆಯ್ಕೆ ಮಾಡಿದ 80 ಜನ ಸದಸ್ಯರಿಗೆ ತಾಲ್ಲೂಕಾ ಮಟ್ಟದ ಸಂಪನ್ಮೂಲ ವ್ಯಕ್ತಿಗಳನ್ನಾಗಿ ತರಬೇತಿಯನ್ನು 2011 ರ ಮೇ 3 & 4 ರಂದು ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಜರುಗಿಸಲಾಗಿದೆ.

3. ಚಿಂದಿ ಆಯುವ/ ಕೊಳಚೆ ಪ್ರದೇಶದ ಮಕ್ಕಳಿಗೆ, ಹುಬ್ಬಳ್ಳಿ–100 ಮಕ್ಕಳು, ಮಂಡ್ಯ–50 ಮಕ್ಕಳಿಗೆ, ರಾಯಚೂರು–100 ಮಕ್ಕಳಿಗೆ 3 ದಿನಗಳ ಕಾಲ ವ್ಯಕ್ತಿತ್ವ ವಿಸಕನ ಶಿಬಿರಗಳನ್ನು ಏರ್ಪಡಿಸಲಾಗಿದೆ.
4. ಜನಪದ ಕ್ರೀಡೆಯಾದ ಮಲ್ಲಕಂಬ, ಯೋಗ ಹಾಗೂ ಜನಪದ ಕಲೆಗಳನ್ನು ಹಳ್ಳಿ ಹಳ್ಳಿಗೆ ತಲುಪಿಸುವ ದಿಸೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಒಂದೆಡೆ ಸೇರಿಸಿ 15 ದಿನಗಳ ಕಾಲ 50 ಮಕ್ಕಳಿಗೆ ತರಬೇತಿಯನ್ನು ನೀಡಲಾಯಿತು.
5. ಜನಪದ ಕಲೆಯಾದ ದೊಡ್ಡಾಟದ ಅಭಿನಯ ಕುಣಿತ, ಬಣ್ಣಗಾರಿಕೆ, ವಸ್ತ್ರವಿನ್ಯಾಸ, ಹಾಡುಗಾರಿಕೆ ಈ ಕುರಿತು 20 ಮಕ್ಕಳ 20 ದಿನಗಳ ಕಾರ್ಯಗಾರಿ ನಡೆಸಲು ಸೌಹಾರ್ದ ಮಕ್ಕಳ ದೊಡ್ಡಾಟ ಸಂಘ ಹೊಳಲು ತಾ. ಹೂವಿನ ಹಡಗಲಿ, ಬಳ್ಳಾರಿ ಜಿಲ್ಲೆ ಇವರ ಮುಖಾಂತರ ಕಾರ್ಯಕ್ರಮವನ್ನು ಜರುಗಿಸಲಾಗಿದೆ.
6. ಶ್ರೀಮೈತ್ರಿ ಇನ್ಸಿಟ್ಯೂಟ್ ಆಫ್ ಸ್ಕಾಲರ್ಸ್ ನವನಗರ, ಇವರು ಹುಬ್ಬಳ್ಳಿಯ ಸುತ್ತಮುತ್ತಲಿನ ಕೊಳಚೆ ಪ್ರದೇಶವನ್ನು ಆಯ್ಕೆಮಾಡಿ ಹಾಗೂ ಚಿಂದಿ ಆಯುವ ಮಕ್ಕಳಿಗಾಗಿ ಹಗೂ ಪಾಲಕರಿಗಾಗಿ 3 ದಿನಗಳ ಕಾಲ ವ್ಯಕ್ತಿತ್ವ ವಿಸಕನ ಕಾರ್ಯಕ್ರಮ ನಡೆಸಲಾಯಿತು. ಇದೇ ರೀತಿ ಮಂಡ್ಯದಲ್ಲಿಯೂ ಕೂಡ 50 ಮಕ್ಕಳಿಗಾಗಿ 3 ದಿನಗಳ ಕಾಲ ಕಾರ್ಯಕ್ರಮ ನಡೆಸಲಾಯಿತು.
7. ರಾಯಚೂರು ಜಿಲ್ಲೆಯ ಕೊಳಚೆ ಪ್ರದೇಶದ ಮಕ್ಕಳಿಗಾಗಿ 3 ದಿನಗಳ ಕಾಲ 100 ಮಕ್ಕಳಿಗೆ ವ್ಯಕ್ತಿತ್ವ ವಿಕಸನ ಕಾರ್ಯಕ್ರಮವನ್ನು ಜರುಗಿಸಲಾಯಿತು.
8. 2011ಎರ ಮೇ 8 ರಿಂದ 22 ರವರೆಗೆ 5 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೆ 3 ದಿನಗಳ ಕಾಲ ಸರ್ಕಾರಿ ಶಾಲೆಯ ಹಿಂದುಳಿದ ಗ್ರಾಮೀಣ ಮಕ್ಕಳಿಗಾಗಿ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ 5 ಜಿಲ್ಲೆಗಳಲ್ಲಿ (ಉಡುಪಿ, ಧಾರವಾಡ, ಗದಗ, ಕೊಪ್ಪಳ ಮತ್ತು ಬಿಜಾಪುರ) ಬೇಸಿಗೆ ಶಿಬಿರ ಏರ್ಪಡಿಸಲಾಗಿದೆ.
9. 2011 ರ ಮೇ 17 ರಿಂದ 26 ರವರೆಗೆ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ಹತ್ತಿರ ಅಗ್ರಗೋಣ ಗುಡ್ಡಗಾಡು ಪ್ರದೇಶದ 100 ಮಕ್ಕಳಿಗಾಗಿ 10 ದಿನಗಳ ಕಾಲ ಸುಲಭ ಗಣಿತ ಹಾಗೂ ಕಾರ್ಯನುಭವ ಕುರಿತು ಕಾರ್ಯಕ್ರಮ ಜರುಗಿಸಲಾಯಿತು.

10. 2011ರ ಮೇ 19, 20 ಮತ್ತು 21 ರಂದು ಹಾವೇರಿ ಜಿಲ್ಲೆಯಲ್ಲಿ ಮೂರು ದಿನಗಳ ಕಾಲ ಕಾವ್ಯ ಕಮ್ಮಟವನ್ನು ಮಕ್ಕಳಿಗೆ ನಡೆಸಲಾಯಿತು.
11. 'ಮಕ್ಕಳ ಚಂದಿರ ಪುಸ್ತಕ' ಪ್ರಶಸ್ತಿಗಾಗಿ ಪುಸ್ತಕಗಳನ್ನು ಆಹ್ವಾನಿಸಲಾಗಿದೆ.
12. 2011 ನೇ ಸಾಲಿನ ಶ್ರೇಷ್ಠ ಸಾಹಿತ್ಯ ಸಂಗ್ರಹಕ್ಕಾಗಿ 6 ಜನ ಸಂಪಾದಕರನ್ನು ಆಯ್ಕೆ ಮಾಡಲಾಗಿದೆ.
13. ದಿನಾಂಕ: 20–8–2011 ರಂದು ಮಿತ್ರಪಡೆ ರಚನೆ ಹಾಗೂ ಸದಸ್ಯರ ತರಬೇತಿ ಕುರಿತು ಪೂರ್ವಭಾವಿ ಸಭೆಯನ್ನು 4 ಜಿಲ್ಲೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸಭೆ ನಡೆಸಲಾಯಿತು.
14. ದಿನಾಂಕ: 27–8–2011ರಂದು ಗ್ರಾಮೀಣ ಮಕ್ಕಳ ಕ್ರೀಡೆಗಳ ದಾಖಲೀಕರಣ ಕುರಿತು ಜಿಲ್ಲಾ ಸಂಗ್ರಹಕರಿಗೆ ಒಂದು ದಿನದ ಕಾರ್ಯಗಾರ ನಡೆಸಲಾಯಿತು.
15. ದಿನಾಂಕ: 8–9–2011 ರಂದು ರಾಜ್ಯದ 30 ಜಿಲ್ಲೆಗಳ 90 ಜಿಲ್ಲಾ ಸದಸ್ಯರಿಗೆ ಒಂದು ದಿನದ ಸಮಾಲೋಚನಾ ಸಭೆ ನಡೆಸಲಾಯಿತು.
16. ದಿನಾಂಕ 30–9–2011 ರಂದು 30 ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಸಮಾಲೋಚನಾ ಸಭೆಯನ್ನು ನಡೆಸಲಾಯಿತು.
17. ಆಗಸ್ಟ್ ತಿಂಗಳಿಂದ ತಾಲ್ಲೂಕು ಮಟ್ಟದ ಮಿತ್ರಪಡೆ ಸದಸ್ಯರ ತರಬೇತಿಗಳು ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಒಟ್ಟು 144 ತಂಡಗಳಿಗೆ (50 ಜನ ಸದಸ್ಯರು ಒಂದು ತಂಡ) ತರಬೇತಿಯನ್ನು ನೀಡಲಾಗುತ್ತಿದೆ.
18. 2011–12 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷಾ ಸಿದ್ಧತೆ ಹಾಗೂ ಪಾಲಕರೊಂದಿಗೆ ಸಂವಾದ ಕಾರ್ಯಕ್ರಮದೊಂದಿಗೆ ರಾಜ್ಯದ 30 ಜಿಲ್ಲೆಗಳಲ್ಲಿ ನಡೆಸಲು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರಿಗೆ ಅನುದಾನ ಬಿಡುಗಡೆ ಮಾಡಿದೆ.

19. ಮಕ್ಕಳ ದಿನಾಚರಣೆ ಅಂಗವಾಗಿ ದಿನಾಂಕ: 14-11-2011 ರಂದು ಧಾರವಾಡದ ಬಾಸೆಲ್ ಮಿಶನ್ ಬಾಲಕಿಯ ಶಾಲೆಯ ಆವರಣದಲ್ಲಿ ಮಕ್ಕಳ ಹಬ್ಬವನ್ನು ಯಶಸ್ವಿಯಾಗಿ ನಡೆಸಲಾಯಿತು.

ರಾಜ್ಯದಲ್ಲಿ ಏಕರೂಪ ವೈದ್ಯ ಸಾಮಾನ್ಯ ಪ್ರವೇಶ ಪರೀಕ್ಷೆ

898 (1046) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತೀಯ ವೈದ್ಯ ಮಂಡಲಿ ದೇಶಾದ್ಯಂತ 2011 ನೇ ಸಾಲಿನಿಂದ ಏಕರೂಪ ವೈದ್ಯ ಸಾಮಾನ್ಯ ಪರೀಕ್ಷೆ ಪದ್ಧತಿಯನ್ನು ಜಾರಿಗೆ ತರಲು ನಿರ್ಧರಿಸಿದೆಯೇ;

ಆ) ಹಾಗಿದ್ದಲ್ಲಿ, ಕರ್ನಾಟಕದಲ್ಲಿ ಈ ಏಕರೂಪ ವೈದ್ಯ ಸಾಮಾನ್ಯ ಪ್ರವೇಶ ಪರೀಕ್ಷೆ ಪದ್ಧತಿಯನ್ನು ಜಾರಿಗೊಳಿಸಲಾಗುವುದೇ;

ಇ) ಇಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹೌದು.

ಆ) ಮತ್ತು ಇ)

ಭಾರತೀಯ ವೈದ್ಯ ಮಂಡಳಿಯ ಏಕರೂಪ ವೈದ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಪದ್ಧತಿಯನ್ನು ರಾಜ್ಯದಲ್ಲಿ ಜಾರಿಗೊಳಿಸಲು ಸರ್ಕಾರವು ಪರಿಶೀಲಿಸುತ್ತಿದೆ.

898 (1046) Sri Ramalinga Reddy : Minister for Medical Education,

a) Whether Medical Council of India has decided to conduct a single Entrance Exam all over India from the year 2011;

b) If so, will this single Entrance Examination system be introduced in Karnataka;

c) If not, what are the reasons?